ಜನರ ಹಿತಾಸಕ್ತಿಯನ್ನು ಹೇಗೆ ನೋಡುತ್ತಿರೋ ಹಾಗೆ ನೋಡುವುದ ಕ್ಕೋಸ್ಕರ ನಾವು ಇದ್ದೇವೆ. ನಮ್ಮ ರೈತರಿಗೂ ನೀರು ಕೊಟ್ಟು ತೆಗೆದುಕೊಂಡು ಹೋಗ್ರಿ. ಅದು ಆಗಲಿಲ್ಲ, ತುಂಗಾ ಏತನೀರಾವರಿ, ಬಗ್ಗೆ 25 ವರ್ಷಗಳಿಂದ ಇಡೀ ತಾಲ್ಲೂಕಿನ ಜನ ಎಲ್ಲರಿಗೂ ಗೋಗರೆದಿದ್ದಾರೆ. ಅದೇ ಜನ ಮೆರವಣಿಗೆಯಲ್ಲಿ ಬಂದು ಜನತಾದರ್ಶನದಲ್ಲಿ ಮುಖ್ಯಮಂತ್ರಿಗಳನ್ನು ಕೂಡ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ತುಂಗಾ ಏತನೀರಾವರಿ ಯೋಜನೆಯನ್ನು ಜಾರಿ ಮಾಡುವುದರಿಂದ ಸುಮಾರು 17 ಸಾವಿರ ಎಕರೆ ನೀರಾವರಿಯಾಗುತ್ತದೆ. ಶಿವಮೆಗ್ಗ ತಾಲ್ಲೂಕಿನಲ್ಲಿರತಕ್ಕ ರೈತರು ಆಕಾಶ ನೋಡಿ ಇವತ್ತೇನು ಭೂಮಿಯಲ್ಲಿ ಬಿತ್ತುತ್ತಿದ್ದಾರೆ ಆ ಬವಣೆ ತಪ್ಪಿಸಿಕೊಂಡು ತಾವು ಮನುಷ್ಯರಾಗಿ ಬದುಕುತ್ತಾರೆ. ತುಂಗಾ ಏತನೀರಾವರಿ ಯೋಜನೆಯನ್ನು ಜಾರಿ ಮಾಡಬೇಕು. ತುಂಗಾ ಮೇಲ್ದಂಡೆ ಯೋಜನೆಯಲ್ಲೂ ಕೂಡ ನಮ್ಮ ತಾಲ್ಲೂಕಿನ ರೈತರಿಗೆ ನೀರಿನ ಪಾಲನ್ನು ಕೊಡಬೇಕು. ಇದು ನನ್ನ ಆಗ್ರಹ ಇರುವಂತಹದ್ದು. ಇದರ ಬಗ್ಗೆ ನಾನು ಅತ್ಯಂತ ಆಗ್ರಹಪೂರ್ವವಾಗಿ ವಿನಂತಿಯನ್ನು ಮಾಡುತ್ತಾ ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಿಯಮ 351 – ಹೇಳಿಕೆ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ.

ಶ್ರೀ ವೈಜನಾಥ ಪಾಟೀಲ್ (ನಗರಾಡಳಿತ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಂಗಳೂರು ನಗರಕ್ಕೆ ನೇತ್ರಾವತಿ ನದಿಯಿಂದ ದಿನಂಪ್ರತಿ 10 ಲಕ್ಷ ಗ್ಯಾಲನ್ ನೀರನ್ನು ಸರಬರಾಜು ಮಾಡುತ್ತಿದ್ದ, ನೀರಿನ ವಿತರಣಾ ವ್ಯವಸ್ಥೆಯನ್ನು ನಗರಪಾಲಿಕೆ ನಿರ್ವಹಿಸುತ್ತಿದೆ. ಹಾಲಿ ಜನಸಂಖ್ಯೆ 4 ಲಕ್ಷ ವಿದ್ದು ದಿನಂಪ್ರತಿ ತಲಾ 100 ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತದೆ.

ನಗರದ ವಿತರಣಾ ವ್ಯವಸ್ಥೆ ಹಾಗೂ ಜಲ ಸಂಗ್ರಹಗಾರಗಳನ್ನು ನಿರ್ಮಿಸಲು ರೂ. 14 ಕೋಟಿ ಅಂದಾಜು ವೆಚ್ಚಕ್ಕೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು ಕಾಮಗಾರಿಯನ್ನು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೊಳ್ಳಲಾಗಿದ್ದು ಯೋಜನೆ ಪ್ರಗತಿಯಲ್ಲಿದೆ :

1)	ಜೀವ ವಿಮಾ ನಿಗಮದ ಸಾಲ	ರೂ.	700 ಲಕ್ಷ
2)	ಸರ್ಕಾರದ ಸಾಲ	ರೂ.	280 ಲಕ್ಷ
3)	ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಂತಿಗೆ	ರೂ.	210 ಲಕ್ಷ
4)	ಮಹಾನಗರ ಪಾಲಿಕೆ ವಂತಿಗೆ	ರೂ.	210 ಲಕ್ಷ
	ಒಟ್ಟು	ರೂ.	1400 ಲಕ್ಷ

ಈ ಯೋಜನೆಗೆ ಜೀವವಿಮಾ ನಿಗಮದಿಂದ 2 ಕೋಟಿ ಹಾಗೂ ನಗರಪಾಲಿಕೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ 1.30 ಕೋಟಿ ಬಂದಿದೆ ಮಂಡಳಿಯು ಈಗಾಗಲೇ 3.50 ಕೋಟಿ ರೂ. ವೆಚ್ಚ ಮಾಡಿ ಶಕ್ತಿ ನಗರ ಮೇರಿಹಿಲ್ ವಲಯಗಳಿಗೆ ನೀರನ್ನು ಒದಗಿಸುಲು ಬೀಡು ಕಬ್ಬಿಣದ ಕೊಳವೆಗಳನ್ನು ಖರೀದಿಸಲು ರೂ. 1.79 ಕೋಟಿಗಳಿಗೆ ಈಗಾಗಲೇ ಸರಬರಾಜು ಆದೇಶ ನೀಡಿದೆ. 14 ಕೋಟಿ ರೂ.ಗಳ ಈ ಯೋಜನೆಯನ್ನು

ವಿವಿಧ ಮೂಲಗಳಿಂದ ಸಕಾಲದಲ್ಲಿ ಹಣವನ್ನು ಒದಗಿಸುವ ವ್ಯವಸ್ಥೆ ಮಾಡಿ ಇನ್ನೆರಡು ವರ್ಷಗಳಲ್ಲಿ ಈ ಯೋಜನೆಯನ್ನು ಚಾಲು ಮಾಡಲಾಗುವುದು.

ಈಗಿನ ಆರ್ಥಿಕ ಮಾದರಿಯಂತೆ ಸರ್ಕಾರ ತನ್ನ ವಂತಿಗೆಯನ್ನು ಸಾಲದ ರೂಪದಲ್ಲಿ ಮಾತ್ರ ಬಿಡುಗಡೆ ಮಾಡಲು ಸಾಧ್ಯ. ಈ ಹಣವನ್ನು ಸರ್ಕಾರವು ಆಯವ್ಯಯದಲ್ಲಿ ನಿಗದಿ ಮಾಡಿರುವಂತೆ ಬಿಡುಗಡೆ ಮಾಡಲಾಗುವುದು. ಆದರೆ ಮಹಾನಗರ ಪಾಲಿಕೆಯು ತನ್ನ ವಂತಿಗೆಯನ್ನು ತಾನೇ ಭರಿಸಬೇಕಾಗುತ್ತದೆ. ಇದನ್ನು ಸರ್ಕಾರವು ಅನುದಾನವಾಗಿ ಪರಿಗಣಿಸಲು ಸದ್ಯಕ್ಕೆ ಸಾಧ್ಯವಿರುವುದಿಲ್ಲ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಸೇರಲಾಗುವುದು.

(ಸದನವು 5 ಗಂಟೆ 51 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಕ 23ನೇ ಫೆಬ್ರವರಿ ಮಾಹೆ 1996ರ ಶುಕ್ರವಾರದಂದು 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)